

# ಶುಲ್ಕವಿಲ್ಲದೇ ಬಳಸಿ ಫ್ಲಿಪ್‌ಕಾರ್ಟ್ ಪೇ ಲೇಟರ್

ಆನ್‌ಲೈನ್ ಮಾರುಕಟ್ಟೆಯಾದ ಫ್ಲಿಪ್‌ಕಾರ್ಟ್ ತನ್ನ ಗ್ರಾಹಕರ ಅನುಕೂಲಕ್ಕೆ ಈ ಹಿಂದೆಯೇ 'ಫ್ಲಿಪ್‌ಕಾರ್ಟ್ ಪೇ ಲೇಟರ್' ಆಯ್ಕೆಯನ್ನು ಪರಿಚಯಿಸಿದೆ. ಆದರೆ, ಇದರ ಅನುಕೂಲದ ಬಗ್ಗೆ ಸಾಕಷ್ಟು ಮಂದಿಗೆ ಇಂದಿಗೂ ತಿಳಿದೇ ಇಲ್ಲ. ಫ್ಲಿಪ್‌ಕಾರ್ಟ್ ಪೇ ಲೇಟರ್ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲಿದೆ.

■ ಶಶಿಕುಮಾರ್ ಸಿ.

'ವಾಲ್‌ಮಾರ್ಟ್' ಒಡೆತನದ ಆನ್‌ಲೈನ್ ಮಾರುಕಟ್ಟೆ ಕಂಪನಿಯಾದ ಫ್ಲಿಪ್‌ಕಾರ್ಟ್ ತನ್ನ ಗ್ರಾಹಕರ ಅನುಕೂಲಕ್ಕಾಗಿ 2017ರಲ್ಲಿ 'ಫ್ಲಿಪ್‌ಕಾರ್ಟ್ ಪೇ ಲೇಟರ್' ಆಯ್ಕೆಯನ್ನು ಪರಿಚಯಿಸಿದೆ. ಆದರೆ, ಫ್ಲಿಪ್‌ಕಾರ್ಟ್ ಸಾಕಷ್ಟು ಗ್ರಾಹಕರಿಗೆ ಈ ಆಯ್ಕೆಯ ಬಗ್ಗೆ ಮಾಹಿತಿಯೇ ಇಲ್ಲ. ಅಷ್ಟಕ್ಕೂ ಏನಿದು 'ಫ್ಲಿಪ್‌ಕಾರ್ಟ್ ಪೇ ಲೇಟರ್' ಎನ್ನುವುದಕ್ಕೆ ಉತ್ತರ ಇಲ್ಲಿದೆ. '40 ದಿನದ ಮಟ್ಟಿಗೆ ಯಾವುದೇ ಶುಲ್ಕ ರಹಿತವಾಗಿ ತನ್ನ ಗ್ರಾಹಕರಿಗೆ ಸಾಲ (ಪ್ರಾರಂಭದಲ್ಲಿ ಗರಿಷ್ಠ ₹3000) ಒದಗಿಸುವ ಆಯ್ಕೆಯೇ' ಈ ಪೇ ಲೇಟರ್.

ಬಹುತೇಕ ಗ್ರಾಹಕರು ತಿಂಗಳ ಸಂಬಳ ಆಧರಿಸಿ ಫ್ಲಿಪ್‌ಕಾರ್ಟ್‌ನಲ್ಲಿ ಶಾಪಿಂಗ್ ಮಾಡುತ್ತಾರೆ. ತಿಂಗಳ ಪ್ರಾರಂಭದಲ್ಲಿ ಶಾಪಿಂಗ್‌ಗೆ ಹೆಚ್ಚಾಗಿ ಒಲವು ತೋರುವ ಅವರು ತಿಂಗಳ ಅಂತ್ಯದಲ್ಲಿ ಹಣದ ಸಮಸ್ಯೆಯಿಂದಾಗಿ ಶಾಪಿಂಗ್‌ಗೆ ಹೆಚ್ಚಿನ ಒಲವು ತೋರುವುದಿಲ್ಲ. ಅಂಥವರ ಅನುಕೂಲಕ್ಕೆ ಮತ್ತು ತನ್ನ ಎಲ್ಲ ವರ್ಗದ ಗ್ರಾಹಕರ ನೆರವಿಗೆ ಫ್ಲಿಪ್‌ಕಾರ್ಟ್ ಈ ಸಾಲ ಒದಗಿಸುವ ಸೌಲಭ್ಯ ಕಲ್ಪಿಸಿದೆ.

### ಬಳಕೆ ಹೇಗೆ?

'ಫ್ಲಿಪ್‌ಕಾರ್ಟ್ ಪೇ ಲೇಟರ್' ಬಳಸಿಕೊಳ್ಳಲು ಆಸಕ್ತಿವುಳ್ಳವರು ಮೊದಲು ಫ್ಲಿಪ್‌ಕಾರ್ಟ್‌ನ ಸದಸ್ಯರಾಗಿರಬೇಕು. ಅಂದರೆ ಫ್ಲಿಪ್‌ಕಾರ್ಟ್‌ನಲ್ಲಿ ನಿಮ್ಮ ಹೆಸರು ನೋಂದಾಯಿಸಿಕೊಂಡು ಖಾತೆ ತೆರೆಯಬೇಕು. ಇದು ಕಡ್ಡಾಯ. ಬಳಿಕ ಮೊಬೈಲ್‌ನಲ್ಲಾದರೆ, ಆ್ಯಪ್ ತೆರೆದು ಹೋಮ್ (ಮೂರು ಗೆರೆಗಳುಳ್ಳ) ಆಯ್ಕೆಯ ಮೇಲೆ ಕ್ಲಿಕ್ಕಿಸಬೇಕು. ಕಂಪ್ಯೂಟರ್‌ನಲ್ಲಾದರೆ ಫ್ಲಿಪ್‌ಕಾರ್ಟ್ ವೆಬ್‌ಸೈಟ್‌ಗೆ ಲಾಗಿನ್ ಆಗಿ ಮೈ ಪ್ರೊಫೈಲ್ ಆಯ್ಕೆ ಕ್ಲಿಕ್ಕಿಸಬೇಕು.

ಬಳಿಕ ಕಾಣುವ 'ಮೈ ಅಕೌಂಟ್' ಅನ್ನು ಕ್ಲಿಕ್ಕಿಸಿದರೆ 'ಫ್ಲಿಪ್‌ಕಾರ್ಟ್ ಪೇ ಲೇಟರ್' ಆಯ್ಕೆ ಕಾಣುತ್ತದೆ. ಅದನ್ನು ಕ್ಲಿಕ್ಕಿಸಿ ಮುಂದುವರೆದರೆ 'ಆಕ್ಟೀವ್' ಅನ್ನುವ ಮತ್ತೊಂದು ಆಯ್ಕೆ ಕಾಣುತ್ತದೆ. ಅದನ್ನೂ ಒತ್ತಿ ಪಾನ್‌ಕಾರ್ಡ್ ಮತ್ತು ಆಧಾರ್ ಕಾರ್ಡ್ ಮಾಹಿತಿಯನ್ನು ನಮೂದಿಸಿ 'ಕಂಟಿನ್ಯೂ' ಆಯ್ಕೆಯನ್ನು ಕ್ಲಿಕ್ಕಿಸಬೇಕು.

ಬಳಿಕ ಬಳಕೆದಾರರ ಮೊಬೈಲ್‌ಗೆ ಅಥವಾ ಇಮೇಲ್‌ಗೆ ಒಟಿಪಿ (ಒನ್ ಟೈಮ್ ಪಾಸ್‌ವರ್ಡ್) ಸಂದೇಶ ಬರುತ್ತದೆ. ಅದನ್ನು ನಮೂದಿಸಿದರೆ ಪೇ ಲೇಟರ್ ಆಯ್ಕೆ ಬಳಕೆಗೆ ಸಿದ್ಧ. ನಂತರ ಮತ್ತೊಮ್ಮೆ ಮೊಬೈಲ್ ಅಥವಾ ಇ–ಮೇಲ್‌ಗೆ 'ಪೇ ಲೇಟರ್' ಆಕ್ಟಿವೇಷನ್ ಆದ ಬಗ್ಗೆ ಸಂದೇಶ ಬರುತ್ತದೆ. ಫ್ಲಿಪ್‌ಕಾರ್ಟ್‌ನಲ್ಲಿ ವಸ್ತುವನ್ನು ಆರ್ಡರ್ ಮಾಡುವಾಗ ಪೇಮೆಂಟ್ ಆಯ್ಕೆ ವೇಳೆ 'ಫ್ಲಿಪ್‌ಕಾರ್ಟ್ ಪೇ ಲೇಟರ್' ಆಯ್ಕೆ ಕಾಣುತ್ತದೆ. ಅದನ್ನು ಕ್ಲಿಕ್ಕಿಸಿ ಪೇಮೆಂಟ್ ಮಾಡಬಹುದು.

### ಷರತ್ತುಗಳು

- ಹಿಂದಿನ ತಿಂಗಳ ಯಾವುದೇ ದಿನದಂದು ವಸ್ತುವನ್ನು ಖರೀದಿಸಿದರೆ ಪ್ರತಿ ಮುಂದಿನ ತಿಂಗಳ 10ರ ಒಳಗೆ ಸಾಲ ಮರುಪಾವತಿ ಮಾಡಲೇಬೇಕು.
- ನಿಗದಿತ ಸಮಯದಲ್ಲಿ ಸಾಲ ಮರುಪಾವತಿ ಮಾಡದಿದ್ದರೆ ₹2000 ವರೆಗಿನ ಸಾಲಕ್ಕೆ ₹100, ₹2001 ರಿಂದ ₹4000 ವರೆಗಿನ ಸಾಲಕ್ಕೆ ₹200 ಮತ್ತು ₹4001ಕ್ಕಿಂತ ಮೇಲ್ಪಟ್ಟ ಸಾಲಕ್ಕೆ ₹400 ಅನ್ನು ದಂಡದ ರೂಪದಲ್ಲಿ ಪ್ರತಿ ತಿಂಗಳು ಪಾವತಿಸಬೇಕಾಗುತ್ತದೆ.

### ಫೋನ್‌ಪೇನಲ್ಲೂ 'ಪೇ ಲೇಟರ್' ಲಭ್ಯ

ಫ್ಲಿಪ್‌ಕಾರ್ಟ್‌ನಂತೆಯೇ ಫೋನ್‌ಪೇ ಆ್ಯಪ್‌ನಲ್ಲೂ 'ಫ್ಲಿಪ್‌ಕಾರ್ಟ್ ಪೇ ಲೇಟರ್' ಆಯ್ಕೆ ಈಗ ಲಭ್ಯ. ಈ ಆಯ್ಕೆಗೂ ಯಾವುದೇ ರೀತಿಯ ಬಡ್ಡಿ ಅಥವಾ ಹೆಚ್ಚುವರಿ ಶುಲ್ಕವನ್ನು ಪಾವತಿಸಬೇಕಿಲ್ಲ. 40 ದಿನಗಳ ಅವಧಿಗೆ ಸಾಲ (ಗರಿಷ್ಟ ₹5000) ಲಭ್ಯವಾಗಲಿದೆ. ಇದನ್ನು ಆಕ್ಟಿವೇಷನ್ ಮಾಡುವ ವಿಧಾನವೂ ಸುಲಭ.

ಮೊದಲು ಫ್ಲಿಪ್‌ಕಾರ್ಟ್ ಆ್ಯಪ್‌ನಲ್ಲಿ 'ಪೇ ಲೇಟರ್' ಆಯ್ಕೆಗೆ ಹೆಸರು ನೋಂದಾಯಿಸಬೇಕು. ಬಳಿಕ ಅದರ ಮೂಲಕ ಒಮ್ಮೆ ಅಥವಾ ಒಂದಕ್ಕಿಂತ ಹೆಚ್ಚಿನ ಬಾರಿ 'ಪೇ ಲೆಟರ್' ಬಳಸಿ ಖರೀದಿ ಮಾಡಬೇಕು. ನಂತರ ಫೋನ್ ಪೇ ಆ್ಯಪ್‌ನಲ್ಲೂ ಈ ಆಯ್ಕೆ ಲಭ್ಯವಾಗುತ್ತದೆ. ಫೋನ್‌ಪೇ ಆ್ಯಪ್ ತೆರೆದು ಪರದೆಯ ಕೆಳಭಾಗದಲ್ಲಿ ಕಾಣುವ 'ಮೈ ಮನಿ' ಆಯ್ಕೆ ಕ್ಲಿಕ್ಕಿಸಬೇಕು. ಬಳಿಕ ಕಾಣುವ ಪೇಮೆಂಟ್ ಆಯ್ಕೆಯಲ್ಲಿನ 'ಫ್ಲಿಪ್‌ಕಾರ್ಟ್ ಪೇ ಲೇಟರ್' ಅನ್ನು ಕ್ಲಿಕ್ಕಿಸಿದರೆ ಮತ್ತೊಂದು ಪ್ರತ್ಯೇಕ ಪರದೆ ತೆರೆದುಕೊಳ್ಳುತ್ತದೆ. ಅದರಲ್ಲಿ ಸಾಲದ ಕುರಿತ ನಿಯಮ–ನಿಬಂಧನೆಗಳ ವಿವರ ಇರುತ್ತದೆ.

ಅದರ ಕೊನೆಯಲ್ಲಿ ಕಾಣುವ ಲಿಂಕ್ ಅನ್ನು ಕ್ಲಿಕ್ಕಿಸಿದರೆ ಫ್ಲಿಪ್‌ಕಾರ್ಟ್ ಆ್ಯಪ್‌ನೊಂದಿಗೆ ಫೋನ್ ಪೇ ಆ್ಯಪ್ ಸಹ ಲಿಂಕ್ ಆಗುತ್ತದೆ. ಬಳಿಕ ಕಾಣುವ ಮತ್ತೊಂದು ಲಿಂಕ್ ಅನ್ನು ಒತ್ತಿದರೆ ಇ–ಮೇಲ್ ಅಥವಾ ಮೊಬೈಲ್‌ಗೆ ಒಟಿಪಿ ರವಾನೆಯಾಗುತ್ತದೆ. ಅದನ್ನು ನಮೂದಿಸಿದರೆ ಫೋನ್ ಪೇ ಆ್ಯಪ್‌ನಲ್ಲೂ 'ಪೇ ಲೆಟರ್' ಬಳಕೆಗೆ ಸಿದ್ಧ. ■